# ಮನದೊಳಗಿನ ಕಣ್ಣು ನಿಮಗುಂಟೇ?



**ಒಂದು ವಸ್ತುವನ್ನು ಅಥವಾ ಸ್ಥಳವನ್ನು ನೆನೆಸಿಕೊಂಡಾಗ ಅಲ್ಲಿನ ದೃಶ್ಯ ಕಣ್ಣಮುಂದೆ ಬಂತೆಂದರೆ ಮೂರನೆ ಕಣ್ಣು ಇದೆ ಎಂದೇ ಅರ್ಥ. ಮನೋವಿಜ್ಞಾನದಲ್ಲಿ ಮೂರನೆ ಕಣ್ಣಿನ ಬಗ್ಗೆ ಅಚ್ಚರಿಯ ಅಧ್ಯಯನ ನಡೆಯುತ್ತಿದ್ದು, ಮನದ ಕಣ್ಣು ಮತ್ತು ಮೆದುಳಿನ ನರಗಳು, ನರಕೊಂಡಿಗಳ ಮಧ್ಯದ ಸಂಬಂಧವನ್ನು ಕಂಡುಹಿಡಿದರೆ ಈ ಸಂಶೋಧನೆ ಗೆದ್ದಂತೆ!**

**■ ಡಾ.ಕೆ.ಎಸ್. ಶುಭ್ರತಾ**

ಮುಕ್ಕಣ್ಣನಾದ ಶಿವನಿಗೆ ಬಿಟ್ಟರೆ, ಇನ್ನೆಲ್ಲರಿಗೂ ಇರುವುದು ಎರಡೇ ಕಣ್ಣುಗಳು. ಒಮ್ಮೆ ಗುರುಗಳೊಬ್ಬರು ವಿದ್ಯಾರ್ಥಿಗಳಿಗೆ ‘ನಿಮಗೆ ಆ ಸರ್ವಶಕ್ತ, ಇನ್ನೊಂದು ಕಣ್ಣು ಕೊಡುವೆನೆಂದರೆ ದೇಹದ ಯಾವ ಭಾಗದಲ್ಲಿ ಕೇಳುವಿರಿ?’ ಎಂದು ಕೇಳಿದರಂತೆ. ‘ಶಿವನಂತೆ ಹಣೆಯಲ್ಲಿ!’ ಎಂದು ಒಂದು ವಿದ್ಯಾರ್ಥಿ ಹೇಳಿದರೆ, ಇನ್ನೊಬ್ಬ ‘ನನ್ನ ಬೆನ್ನ ಹಿಂದೆ ಆಗುವುದನ್ನು ನೋಡಲು ಬೆನ್ನಲ್ಲಿ’ ಎಂದು ಹೇಳಿದನಂತೆ. ಅಲ್ಲಿದ್ದ ಬುದ್ಧಿವಂತ ವಿದ್ಯಾರ್ಥಿಯೊಬ್ಬ ‘ನನ್ನ ಬೆರಳ ತುದಿಯಲ್ಲಿ ಆ ಕಣ್ಣು ಬೇಕು. ಆ ಬೆರಳನ್ನು ಎಲ್ಲಿ ಬೇಕಾದರೂ ಒಯ್ದು, ನಾನು ಎಲ್ಲವನ್ನೂ ನೋಡಬಹುದು’ ಎಂದನಂತೆ.

ಮನೋವೈದ್ಯೆಯಾದ ನನ್ನ ಪ್ರಕಾರ ಆ ಮೂರನೆಯ ಕಣ್ಣು ಮನದೊಳಗಿದ್ದರೆ ಎಷ್ಟು ಚೆನ್ನ ಅಲ್ಲವೇ?

‘ಜೋಗದ ಸಿರಿ ಬೆಳಕಿನಲ್ಲಿ
ತುಂಗೆಯತೆನೆ ಬಳುಕಿನಲಿ..’

ಕವಿ ಕೆ.ಎಸ್. ನಿಸ್ಸಾರ್ ಅಹಮದ್ ಅವರ ಈ ಕವನ ಕೇಳಿದಾಗ, ನಿಮ್ಮ ಕಣ್ಣ ಮುಂದೆ ಭೋರ್ಗರೆಯುತ್ತಿರುವ ಜೋಗ ಜಲಪಾತ, ಸಹ್ಯಾದ್ರಿಯ ರುದ್ರರಮಣೀಯ ಪರ್ವತ ಶ್ರೇಣಿ, ಮುಂತಾದವು ಕಣ್ಣ ಮುಂದೆ ಬಂದವೇ? ಎದುರಿಗೇ ಇದ್ದಂತೆ ಕಾಣುತ್ತಿದ್ದರೆ, ನಿಮಗೆ ಮನದೊಳಗಿನ ಕಣ್ಣು ಇದೆಯೆಂದೇ ಅರ್ಥ. ಇಲ್ಲವಾದರೆ, ಆ ಮೂರನೆಯ ಕಣ್ಣು ಇಲ್ಲ ಎಂದರ್ಥ.

## ಏನಿದು, ಮನದೊಳಗಿನ ಕಣ್ಣು?

ಬ್ರಿಟಿಷ್ ನರರೋಗತಜ್ಞ ಆಡಮ್ ಜೇಮನ್ ಎಂಬುವರು 2010ರಲ್ಲಿ ಮೊದಲ ಬಾರಿ ತನ್ನ ರೋಗಿಯೊಬ್ಬರ ಈ ಮನದ ಕಣ್ಣಿನ ಕತೆಯನ್ನು ವಿವರಿಸಿದರು. ಜೇಮನ್ ಅವರ ರೋಗಿ ‘ಶ್ರೀ ಎಕ್ಸ್’ ಎನ್ನುವವರು ಹೃದಯ ಕಾಯಿಲೆಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆ ಶಸ್ತ್ರಚಿಕಿತ್ಸೆಯ ನಂತರದ ದಿನಗಳಲ್ಲಿ ಅವರು ಹೊಸದೊಂದು ಅನುಭವವನ್ನು ವಿವರಿಸಿದರು. ಯಾರಾದರೂ ಪರಿಚಿತ ಜನರ, ವಸ್ತುಗಳ ಬಗ್ಗೆ ಯೋಚಿಸಿದರೆ, ಶ್ರೀ ಎಕ್ಸ್‌ಗೆ ಆ ಮುಖ/ವಸ್ತುವಿನ ಚಿತ್ರ ಮುಂಚೆ ಮನಸ್ಸಿನಲ್ಲಿ ಮೂಡುತ್ತಿದ್ದಂತೆ, ಈಗ ಮೂಡುತ್ತಿರಲಿಲ್ಲ. ಆದರೆ ಆ ವ್ಯಕ್ತಿ /ವಸ್ತುಗಳ ಬಗೆಗಿನ ನೆನಪುಗಳು ನಿಚ್ಚಳವಾಗಿದ್ದವು. ಉದಾಹರಣೆಗೆ, ಬ್ರಿಟನ್‌ನ ಆಗಿನ ಪ್ರಧಾನಮಂತ್ರಿ ಟೋನಿ ಬ್ಲೇರ್ ಬಗ್ಗೆ ಪ್ರಶ್ನೆಗಳನ್ನು ಕೇಳಿದರೆ, ಅವರ ಚಿತ್ರ ಮನಸ್ಸಿನಲ್ಲಿ ಮೂಡದಿದ್ದರೂ, ಅವರಿಗೆ ಯಾವ ಬಣ್ಣದ ಕಣ್ಣುಗಳಿವೆ ಎಂದರೆ ‘ಬೆಕ್ಕಿನ ಕಣ್ಣು’ ಎಂದು ಉತ್ತರಿಸುತ್ತಿದ್ದರು. ಈ ಕೇಸ್‌ನ ಜಾಡು ಹಿಡಿದು, ಮತ್ತಷ್ಟು ಜನರನ್ನು ಭೇಟಿ ಮಾಡಿ, ಸಂದರ್ಶನ ಮಾಡಿದಾಗ, ತುಂಬಾ ಮಂದಿಯಲ್ಲಿ ಈ ಮನದ ಕಣ್ಣು ಇರುವುದು ಮತ್ತು ಇರದೇ ಇರುವುದು ಬೆಳಕಿಗೆ ಬಂತು. ಡಾ. ಜೇಮನ್ ಮತ್ತು ಅವರ ತಂಡ ಮತ್ತಷ್ಟು ಈ ನಿಟ್ಟಿನಲ್ಲಿ ಸಂಶೋಧನೆ ಮಾಡಿತು. ಆಗ ಬೆಳಕಿಗೆ ಬಂದ ವಿಷಯಗಳು ಅತ್ಯಂತ ಕುತೂಹಲಕಾರಿ.

ಮನದೊಳಗಿನ ಕಣ್ಣು ಇಲ್ಲದಿರುವುದಕ್ಕೆ ಅಫಾಂಟೇಸಿಯಾ ಎನ್ನುತ್ತಾರೆ. ಬಹಳಷ್ಟು ಜನರಿಗೆ ಹುಟ್ಟಿನಿಂದಲೇ ಈ ಮನದ ಕಣ್ಣು ಇರುವುದಿಲ್ಲ. ಕಲ್ಲಿನ ಆಕಾರವನ್ನು ನೋಡಿ ಅಥವಾ ಮುಟ್ಟಿ ನಿರ್ಧರಿಸುವುದು. ಅದೇ ಕತ್ತಲಿನಲ್ಲಿ ಕಲ್ಲಿನ ಆಕಾರ ಹೇಳಿ ಎಂದರೆ ಹೇಗಿರುತ್ತದೋ ಹಾಗೇ ಅಫಾಂಟೇಸಿಯಾ ಕೂಡ. ಹಾಗೆಂದು ಈ ಜನರಿಗೆ ಪೈನ್ ಮರಗಳ ಎಲೆಗಳು ಮತ್ತು ಹುಲ್ಲು ಎರಡರ ಮಧ್ಯೆ ಯಾವುದು ಹೆಚ್ಚು ಹಸಿರು ಎಂದು ಕೇಳಿದರೆ ತಮ್ಮ ನೆನಪಿನ ಶಕ್ತಿಯಿಂದ ಸರಿಯಾಗಿ ಪೈನ್ ಎಲೆಗಳೇ ಹೆಚ್ಚು ಹಸಿರು ಎಂದು ಉತ್ತರಿಸಿದರಂತೆ. ಇದಕ್ಕೆ ತದ್ವಿರುದ್ಧವಾಗಿ ಅಫಾಂಟೇಸಿಯಾ ಇರುವವರಲ್ಲಿ, ತಮ್ಮ ಹಳೆಯ ಜೀವನದ ಅನುಭವಗಳನ್ನು ಯಥಾವತ್ತಾಗಿ ನೆನಪಿಡುವುದರಲ್ಲಿ, ಇತರರಿಗಿಂತ ಸ್ವಲ್ಪ ಹಿಂದೆ ಎಂದೇ ಹೇಳಬೇಕು. ಎಲ್ಲೋ ಒಂದು ಕಡೆ, ಪದೇ ಪದೇ ಹಳೆಯ ಕಹಿ ನೆನಪುಗಳನ್ನು ನೆನೆಸಿ